

ಮನೆಯಿಂದ ಹೊರಡುವುದು ಕಷ್ಟ ಸಾರ್, ದಯವಿಟ್ಟು ಈ ಸಲ ಬಿಟ್ಟು ಬಿಡಿ. ನೆಕ್ಸ್ಟ್ ಟೈಂ ನೋಡುವ' ಅಂತ ಪಕ್ಕಾ ರಾಜಕಾರಣಿಯ ಶೈಲಿಯಲ್ಲಿ ಉತ್ತರ ಕೊಟ್ಟೆ.

'ಯಾಕೆ? ಹಾಗೆಲ್ಲ ನೀವು ನಿರಾಕರಿಸುವ ಹಂಗೇ ಇಲ್ಲ ನೋಡಿ. ನೀವು ನಮ್ಮ ನಡುವಿನ ಗಮನಾರ್ಹ ಬರಹಗಾರ್ತಿ. ನಿಮಗೆ ಏನೂ ತ್ರಾಸ ಆಗದಂತೆ ನೋಡಿಕೊಳ್ಳುತ್ತೇವೆ, ಕಾರು ಕಳಿಸುತ್ತೇವೆ ಮೇಡಂ.'

ಇವರುಗಳು ಸುಮ್ಮಗೆ ಈ ಸಲ ಬಿಡುವಂಗೆ ಕಾಣುದಿಲ್ಲ. ಇವರೇ ಎಲ್ಲಾ ಫಿಕ್ಸ್ ಮಾಡಿ ಬಂದಂಗಿದೆ. ಮೊದಲೇ ಆ ದಿನದ ಡೇಟ್ ಫಿಕ್ಸ್ ಆದುದರ ಬಗ್ಗೆ ನಾನೇ ಹೇಳಿದ್ದರೆ ಇಷ್ಟುದ್ದ ಸುಳ್ಳು ಹೆಣೆಯಬೇಕಾಗುತ್ತಿರಲಿಲ್ಲ. ಸುಳ್ಳು ಹೇಳುವುದು ಸುಲಭ, ಆದರೆ ಅದರಿಂದ ತಪ್ಪಿಸಿಕೊಳ್ಳುವುದು ಎಷ್ಟು ಕಷ್ಟ ಅಂತ ಈಗ ಅರಿವಿಗೆ ಬರತೊಡಗಿತು. ಒಂದು ಸುಳ್ಳಿಂದ ಪಾರಾಗಲು ಮತ್ತೊಂದು ಸುಳ್ಳು. ನನ್ನ ನಿಜವಾದ ಪರಿಸ್ಥಿತಿ, ಭಾಷಣ ಮಾಡಲು ನಾನು ಪಡುವ ಬವಣೆ ಇದನ್ನೆಲ್ಲಾ ಅವರಿಗೆ ಹೇಗೆ ಮನದಟ್ಟು ಮಾಡಿಸುವುದು? ರಾಮಶಿವನೇ... ಈ ಒಂದು ಸುಳ್ಳನ್ನು ಮುಚ್ಚಿ ಹಾಕಲು ಇನ್ನು ಎಷ್ಟು ಸುಳ್ಳು